## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 145(179)
ಮಾನ್ಯ ಸದಸ್ಯರ ಹೆಸರು : ಶ್ರೀ ಎಸ್.ವ್ಹಿ. ಸಂಕನೂರ
(ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 05.12.2023
ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| 1 | ಕೆಐಎಡಿಬಿ ನರಸಾಪುರ, ಗದಗ, ಬೆಟಗೇರಿ ಇಲ್ಲಿ ಕೈಗಾರಿಕೆ ಸ್ಥಾಪನೆ ಮಾಡುವವರಿಗೆ ಈ ಹಿಂದೆ ಒಂದು ಎಕರೆಗೆ ರೂ. 2 ಲಕ್ಷ ರೂ.3 ಲಕ್ಷ ಹಾಗೂ ರೂ.4 ಲಕ್ಷದಂತೆ ಬೆಲೆ ನಿಗಧಿಪಡಿಸಿ ಜಾಗಗಳನ್ನು ಹಸ್ತಾಂತರ ಮಾಡಿದ್ದು ನಿಜವೇ; | ದಿನಾಂಕ:05.01.2000 ರಂದು ನಡೆದ ಮಂಡಳಿಯ ಸಭೆಯು ನರಸಾಪುರ ಗದಗ ಜಿಲ್ಲೆಯಲ್ಲಿಕೈಗಾರಿಕಾ ಪ್ರದೇಶವನ್ನು 162.75 ಎಕರೆ ವಿಸ್ತೀರ್ಣದಲ್ಲಿ ಅಭಿವೃದ್ಧಿ ಪಡಿಸಲು ಅನುಮೋದನೆ ನೀಡಿ ನಿವೇಶನಗಳ ತಾತ್ಕಾಲಿಕ ಹಂಚಿಕೆ ದರ ಎಕರೆ ಒಂದಕ್ಕೆ ರೂ.2.00 ಲಕ್ಷದಿಂದ ರೂ.4.00 ಲಕ್ಷದಂತೆ ನಿಗದಿಪಡಿಸಿರುತ್ತದೆ. |
| 2 | ಇತ್ತೀಚಿಗೆ ಸದರಿ ಜಾಗಗಳಿಗೆ ಬೆಲೆಯನ್ನು ಹೆಚ್ಚಿಸಿ ರೂ 2 ಲಕ್ಷದಿಂದ 20 ಲಕ್ಷಕ್ಕೆ ಹಾಗೂ 3 ಲಕ್ಷದಿಂದ 30 ಲಕ್ಷಕ್ಕೆ ಹೆಚ್ಚಿಸಿ ಹಣ ಭರಣಾ ಮಾಡಲು ಸಂಬಂಧಪಟ್ಟವರಿಗೆ ನೋಟೀಸ್ ಜಾರಿ ಮಾಡಿದ್ದು ನಿಜವೇ; | ದಿನಾಂಕ: 06.08.2020 ರಂದು ನಡೆದ ಮಂಡಳಿ ಸಭೆಯಲ್ಲಿ ನರಸಾಪುರ ಕೈಗಾರಿಕಾ ಪ್ರದೇಶದ ಅಂತಿಮ ದರವನ್ನು ರೂ.2 ಲಕ್ಷದಿಂದ 20 ಲಕ್ಷಕ್ಕೆ ಹಾಗೂ ರೂ.3 ಲಕ್ಷದಿಂದ 30 ಲಕ್ಷಕ್ಕೆ ಹೆಚ್ಚಿಸಿರುತ್ತದೆ. ಹಾಗೂ ಹಂಚಿಕೆದಾರರಿಂದ ಅಂತಿಮ ದರದ ಹೆಚ್ಚುವರಿ ಮೊತ್ತವನ್ನು ಪಾವತಿಸಿ, ಶುದ್ಧಕ್ರಯ ಪತ್ರ ಪಡೆಯಲು ನೋಟೀಸ್‌ಗಳನ್ನು ನೀಡಲಾಗಿರುತ್ತದೆ. |
| 3 | ಸದರಿ ಜಾಗಗಳಿಗೆ 10 ಪಟ್ಟು ಬೆಲೆ ಹೆಚ್ಚಿಸಿರುವ ಕಾರಣ ಸಂಬಂಧಪಟ್ಟ ಕೈಗಾರಿಕಾ ಮಾಲೀಕರು ಸದ್ಯ ಹೆಚ್ಚಿಸಿರುವ ಬೆಲೆಯನ್ನು ಕಡಿಮೆ ಮಾಡಲು ಒತ್ತಾಯಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವೇ; ಹಾಗಿದ್ದಲ್ಲಿ, ಸರ್ಕಾರ ಈ ಕುರಿತು ತೆಗೆದುಕೊಂಡ ಕ್ರಮಗಳೇನು? | ಸದರಿ ಕೈಗಾರಿಕಾ ಪ್ರದೇಶಕ್ಕಾಗಿ ವಶಪಡಿಸಿಕೊಂಡ ಜಮೀನುಗಳ ಭೂಮಾಲೀಕರು 1997 ರಲ್ಲಿ ಪ್ರತಿ ಎಕರೆಗೆ ರೂ.85,000/- ದರ ನಿಗದಿಪಡಿಸಿ, ಪಾವತಿಸಿರುವ ಮೊತ್ತ ಕಡಿಮೆಯಾಗಿದೆ ಎಂದು ಹೆಚ್ಚುವರಿ ಭೂ ಪರಿಹಾರ ಕೋರಿ ಸಿವಿಲ್ ನ್ಯಾಯಾಲಯ, ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯದ ಮುಂದೆ ಕೇಸು ದಾಖಲು ಮಾಡಲಾಗಿದ್ದು, ಅಂತಿಮವಾಗಿ ಸರ್ವೋಚ್ಚ ನ್ಯಾಯಾಲಯವು 2018 ರಲ್ಲಿ ಸಿವಿಲ್ ಅಪಿಲ್ ನಂ. 3321-3348/2010 ರಲ್ಲಿ ಪ್ರತಿ ಎಕರೆಗೆ ರೂ.4.00 ಲಕ್ಷ ಹಾಗೂ ಭೂಸ್ವಾಧೀನ ಕಾಯ್ದೆ |

| | | |
|---|---|---|
| | | ಪ್ರಕಾರ ಇತರ ಭತ್ಯೆಗಳೊಂದಿಗೆ ಹೆಚ್ಚುವರಿ ಭೂಪರಿಹಾರ ಪಾವತಿಸಲು ಆದೇಶಿಸಿರುವ ಹಿನ್ನೆಲೆಯಲ್ಲಿ ಮಂಡಳಿಯು ಸುಮಾರು ರೂ.28.86 ಕೋಟಿ ಹೆಚ್ಚುವರಿ ಭೂ ಪರಿಹಾರ ಭೂಮಾಲೀಕರಿಗೆ ಪಾವತಿಸಿರುವುದರಿಂದ ಅಂತಿಮ ದರವನ್ನು 10 ಪಟ್ಟು ಹೆಚ್ಚಿಗೆ ನಿರ್ಧರಿಸಲಾಗಿರುತ್ತದೆ.<br><br>ಮುಂದುವರೆದು, ನರಸಾಪುರ ಇಂಡಸ್ಟ್ರೀಯಲ್ ಅಸೋಸಿಯೇಷನ್ ಅಧ್ಯಕ್ಷರು, ಮಂಡಳಿಗೆ ದಿನಾಂಕ: 10.12.2020 ರಂದು ಮನವಿ ಸಲ್ಲಿಸಿ, ಮಂಡಳಿಯು ನಿರ್ಧರಿಸಿರುವ ಅಂತಿಮ ದರವನ್ನು ಪರಿಷ್ಕರಿಸಲು ಕೋರಿರುತ್ತಾರೆ. ಮಂಡಳಿಯಲ್ಲಿ ಸದರಿ ಮನವಿಯನ್ನು ಪರಿಶೀಲಿಸಲಾಗಿ ಮಂಡಳಿಯು ನಿರ್ಧರಿಸಿರುವ ಅಂತಿಮ ದರವು ಭೂಮಾಲೀಕರಿಗೆ ಪಾವತಿಸಿರುವ ಭೂಪರಿಹಾರ ಹಾಗೂ ಅಭಿವೃದ್ಧಿಪಡಿಸಲು ಪಾವತಿಸಿರುವ ಕಾಮಗಾರಿ ವೆಚ್ಚ ಇವುಗಳನ್ನು ಸೇರಿಸಿ, ದರ ನಿಗದಿಪಡಿಸಿದ್ದು, ಸದರಿ ದರದಲ್ಲಿ ಯಾವುದೇ ಲಾಭಾಂಶ ಸೇರಿಸದೇ ನಿರ್ದರಿಸಿರುವುದರಿಂದ ಸದರಿಯವರ ಕೋರಿಕೆ ಯನ್ನು ಪರಿಗಣಿಸಲಾಗಿರುವುದಿಲ್ಲ. |

**ಸಂಖ್ಯೆ: ಸಿಐ 296 ಐಎಪಿ 2023**

(ಎಂ.ಬಿ. ಪಾಟೀಲ)
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**